# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 208/2018

| ಸಿಡಬ್ಲ್ಯೂ | 2 | ಪಿಡಬ್ಲ್ಯೂ | 10 |
|---|---|---|---|

ಸಾಕ್ಷಿದಾರರ ಹೆಸರು : ನಾಗರಾಜ

ತಂದೆಯ ಹೆಸರು : ಬಸವನಗೌಡ

ವಯಸ್ಸು : 55 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 09.07.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬಳಿಗನೂರು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಪ್ರಕರಣದ ಬಗ್ಗೆ ಗೊತ್ತಿರುವುದಿಲ್ಲಾ. 18.06.2018 ಪೋಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ನಿ ಪಿ 2 ಎಂದು ಗುರುತಿಸಲಾಗಿದೆ , ಸಾಕ್ಷಿ ಸಹಿಯನ್ನು ನಿ ಪಿ 2(ಡಿ) ಎಂದು ಗುರುತಿಸಲಾಯಿತು. 10 ರಿಂದ 11 ಗಂಟೆಂದವರೆಗೆ ನಿ ಪಿ 2 ರಲ್ಲಿ ಸಹಿ ಮಾಡಿರುತ್ತೇನೆ. ನಾನು ಮತ್ತು ಮಂಜುನಾಥ ಹಾಜರಿದ್ದೆವು. ಒಂದು ಕುಡುಗೋಲು ಎರಡು ಕಟ್ಟಿಗೆ ವಶಪಡಿಸಿಕೊಂಡಿರುತ್ತಾರೆ. ಪೋಟೋ ತೆಗೆದಿರುತ್ತಾರೆ. ಕುಬೇರ ಗೌಡ ರವರ ತಾಯಿ ಸಿದ್ದಮ್ಮ ರವರ ಜಾಕೇಟ್ ಕೂಡ ವಶಪಡಿಸಿಕೊಂಡಿರುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ 1 ರಿಂದ 3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ B.G.B. ವಕೀಲರಿಂದಃ-**

ಕುಬೇರ ಗೌಡ ನನಗೆ ಸಂಬಂಧಿಕನಲ್ಲಾ. ಪೋಲೀಸರು ನನಗೆ ನೋಟೀಸು ಕೊಟ್ಟಿದ್ದರು ನೋಟೀಸಿಗೆ ನಾನು ಸಹಿ ಕೂಡ ಮಾಡಿರುತ್ತೇನೆ. ಜಾಗಳ ಆಗಿದೆ ಪಂಚನಾಮೆಗೆ ಬನ್ನಿ ಅಂತಾ ನೋಟೀಸು ಕೊಟ್ಟಿರುತ್ತಾರೆ. ಪಂಚನಾಮೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲಾ ಎಂದರೆ ಗೊತ್ತಿದೆ. ನ್ಯಾಯಾಲಯದ ಮುಂದೆ 1 ಕಟ್ಟಿಗೆ ಇದೆ ಎಂದರೆ ಸರಿ. ನಿ ಡಿ 1 ರಲ್ಲಿ ಕಟ್ಟಿಗೆ ಕುಪ್ಪುಸ ಕಾಣಿಸುವುದಿಲ್ಲಾ ಎಂದರೆ ಸರಿ. ಕುಬೇರಗೌಡನಿಗೆ ಸಹಾಯ ಮಾಡಲು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸ ಠಾಣೆ ಯಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಮೂಲತಃ ನಮ್ಮ ಊರಿನವರಾಗಿದ್ದು ನಂತರ ಕಂಚಿಕೇರಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಹೀಗಾಗಿ ಕುಬೇರ ಗೌಡನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.